# ವಿಶ್ವಾದ್ಯಂತದ ಅಭ್ಯರ್ಥಿ ಗೌಪ್ಯತೆ ನೀತಿ

*ಕೊನೆಯದಾಗಿ ಪರಿಷ್ಕರಿಸಿದ್ದು: ನವೆಂಬರ್ 22, 2021*

## ಈ ಸೂಚನೆಯ ಕುರಿತು

Intel ವೆಬ್‌ಸೈಟ್‌ನ Intel ನಲ್ಲಿ ಉದ್ಯೋಗಗಳು ವಿಭಾಗದ ಮೂಲಕ ಮೂಲಕ ಸೇರಿದಂತೆ ಉದ್ಯೋಗಾಕಾಂಕ್ಷಿಗಳು ("ಅಭ್ಯರ್ಥಿಗಳು") ಸಲ್ಲಿಸಿದ ವೈಯಕ್ತಿಕ ಮಾಹಿತಿಯ ಪ್ರಕ್ರಿಯೆಗೊಳಿಸುವಿಕೆ ಮತ್ತು ಸಲ್ಲಿಕೆಗೆ ಸಂಬಂಧಿಸಿದ Intel ನ ಗೌಪ್ಯತೆ ಅಭ್ಯಾಸಗಳ ಕುರಿತ ಹೆಚ್ಚುವರಿ ವಿವರಗಳನ್ನು ಈ ಪುಟವು ಒದಗಿಸುತ್ತದೆ. ಈ ಸಾರ್ವತ್ರಿಕ ಅಭ್ಯರ್ಥಿ ಗೌಪ್ಯತೆ ಸೂಚನೆಯು (ಈ "ಸೂಚನೆ") Intel ಗೌಪ್ಯತೆ ಸೂಚನೆಗೆ ಪೂರಕವಾಗಿದೆ.

## ನಿಮ್ಮ ವೈಯಕ್ತಿಕ ಮಾಹಿತಿಯ ಸಂಗ್ರಹ, ಬಳಕೆ ಮತ್ತು ಹಂಚಿಕೊಳ್ಳುವಿಕೆ

ನೇಮಕಾತಿ ಮತ್ತು ಹುದ್ದೆ ಭರ್ತಿ ಉದ್ದೇಶಗಳಿಗಾಗಿ ಅಭ್ಯರ್ಥಿಯ ವೈಯಕ್ತಿಕ ಮಾಹಿತಿಯನ್ನು Intel ಪ್ರಕ್ರಿಯೆಗೊಳಿಸುತ್ತದೆ. ಅಭ್ಯರ್ಥಿಯನ್ನು Intel ಒಮ್ಮೆ ನೇಮಕಾತಿ ಮಾಡಿಕೊಂಡ ಬಳಿಕ, ಉದ್ಯೋಗದಲ್ಲಿರುವ ಅವಧಿಗೆ ಉದ್ಯೋಗಿಯ ವೈಯಕ್ತಿಕ ಮಾಹಿತಿಯನ್ನು Intel ನ ಉದ್ಯೋಗಿ ಗೌಪ್ಯತೆ ಸೂಚನೆಯಿಂದ ರಕ್ಷಿಸಲಾಗುತ್ತದೆ.

ನೇಮಕಾತಿ ಉದ್ದೇಶಗಳಲ್ಲಿ ನಿಮ್ಮೊಂದಿಗೆ ಸಂವಹನ ನಡೆಸುವುದು, ನಿಮ್ಮ ಅರ್ಹತೆಗಳು ಮತ್ತು ಕೌಶಲ್ಯಗಳನ್ನು ಆಂತರಿಕವಾಗಿ ಮೌಲ್ಯಮಾಪನ ಮಾಡುವುದು, ಸಂದರ್ಶನ ಅಥವಾ ಆಯ್ಕೆ ಚರ್ಚೆಗಳಿಗಾಗಿ ಸಿದ್ಧತೆ ಮಾಡುವುದು (ಅನ್ವಯಿಸುವಲ್ಲಿ ಪ್ರಯಾಣಕ್ಕೆ ವ್ಯವಸ್ಥೆ ಮಾಡುವುದು ಅಥವಾ ಅಭ್ಯರ್ಥಿಗಳ ವೆಚ್ಚವನ್ನು ಮರುಭರ್ತಿ ಮಾಡುವುದು ಸೇರಿದಂತೆ) ಸೇರಿವೆ ಹಾಗೂ ಕೆಲವು ಹುದ್ದೆಗಳಿಗೆ ಹಿನ್ನೆಲೆ ಪರಿಶೀಲನೆಗಳಿಗೆ ಎಡೆಮಾಡಿಕೊಡಬಹುದು, ಇವುಗಳನ್ನು ಹೆಚ್ಚುವರಿ ಸೂಚನೆ ಮತ್ತು ಅನ್ವಯಿಸುವ ಕಾನೂನುಗಳ ಅನುಸಾರವಾಗಿ ಮಾಡಲಾಗುತ್ತದೆ. ವಿಮರ್ಶೆಗಾಗಿ Intel ಗೆ ಸಲ್ಲಿಸಿದ ಸ್ವಯಂವಿವರಗಳು, ಹಿಂದಿನ ಉದ್ಯೋಗ, ಸಂಬಂಧಿಸಿದ ಹುದ್ದೆಗಳು ಮತ್ತು ದಿನಾಂಕಗಳು, ಗಮನಾರ್ಹ ಸಾಧನೆಗಳು, ಶಿಕ್ಷಣ, ಪಡೆದ ಪದವಿಗಳು ಅಥವಾ ಪ್ರಮಾಣಪತ್ರಗಳು, ದಿನಾಂಕ ಮತ್ತು ಜಾರಿ ಮಾಡಿದ ಶಿಕ್ಷಣಸಂಸ್ಥೆಗಳು ಹಾಗೂ ಇತರ ಸಂಬಂಧಿಸಿದ ಬಹುಮಾನಗಳು ಅಥವಾ ಸಾಧನೆಗಳು ಸೇರಿದಂತೆ ಹುದ್ದೆ ಅರ್ಹತೆಗಳು ಮತ್ತು ಉದ್ಯೋಗದ ಇತಿಹಾಸಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮಾತ್ರ ಒಳಗೊಂಡಿರಬೇಕು. ನೇಮಕಾತಿ ಪ್ರಕ್ರಿಯೆಯ ಸಂದರ್ಭ, ಸಾರ್ವಜನಿಕವಾಗಿ ಲಭ್ಯವಿರುವ ಮೂಲಗಳಿಂದ ಅಥವಾ ಉಲ್ಲೇಖಗಳು, ಹಿನ್ನೆಲೆ ತಪಾಸಣೆ ಪೂರೈಕೆದಾರರು ಮತ್ತು ಅದೇ ರೀತಿಯವರು ಸೇರಿದಂತೆ ತೃತೀಯ ಪಕ್ಷಗಳಿಂದ ನಾವು ಮಾಹಿತಿಯನ್ನು ಪಡೆದುಕೊಳ್ಳಬಹುದು. ಈ ತೃತೀಯ ಪಕ್ಷಗಳಿಂದ ನಾವು ಸ್ವೀಕರಿಸುವ ಮಾಹಿತಿಯನ್ನು ನಿಮ್ಮ ಸಮ್ಮತಿಯೊಂದಿಗೆ ಸಂಗ್ರಹಿಸಲಾಗಿದೆ ಅಥವಾ ನಮಗೆ ನಿಮ್ಮ ಮಾಹಿತಿಯನ್ನು ಬಹಿರಂಗಪಡಿಸಲು ಈ ತೃತೀಯ ಪಕ್ಷಗಳಿಗೆ ಕಾನೂನುಬದ್ಧ ಅನುಮತಿ ನೀಡಲಾಗಿದೆ ಎಂದು ದೃಢಪಡಿಸಿಕೊಳ್ಳಲು ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

## ಉಳಿಸಿಕೊಳ್ಳುವಿಕೆ

Intel ನ ಗೌಪ್ಯತೆ ಸೂಚನೆಯಲ್ಲಿ ತಿಳಿಸಲಾಗಿರುವ ಅವಧಿಗಳು ಮತ್ತು ಉದ್ದೇಶಗಳಿಗಾಗಿ ನಾವು ವೈಯಕ್ತಿಕ ಮಾಹಿತಿಯನ್ನು ಉಳಿಸಿಕೊಳ್ಳುತ್ತೇವೆ. ಮಾಹಿತಿಯ ವಿಧ ಮತ್ತು ಅದನ್ನು ಹೇಗೆ ಬಳಸಲಾಗುತ್ತದೆ ಎನ್ನುವುದನ್ನು ಆಧರಿಸಿ ಉಳಿಸಿಕೊಳ್ಳುವಿಕೆ ಅವಧಿಗಳು ಗಮನಾರ್ಹವಾಗಿ ವ್ಯತ್ಯಾಸವಾಗಬಹುದು. ಅನ್ವಯಿಸುವ ಕಾನೂನಿನಿಂದ ಭಿನ್ನ ಉಳಿಸಿಕೊಳ್ಳುವಿಕೆ ಅವಧಿ ಅಗತ್ಯವಿರುವುದನ್ನು ಹೊರತುಪಡಿಸಿ ನೇಮಕಾತಿ ಸಂಬಂಧಿತ ದಾಖಲೆಗಳನ್ನು ಸಂಬಂಧ

ಮುಕ್ತಾಯಗೊಳಿಸಿದ ದಿನಾಂಕದಿಂದ ಗರಿಷ್ಠ ಮೂರು ವರ್ಷಗಳವರೆಗೆ Intel ಇರಿಸಿಕೊಳ್ಳುತ್ತದೆ, ಉದಾಹರಣೆಗೆ, Intel ನ ಪ್ರಮಾಣಿತ ಉಳಿಸಿಕೊಳ್ಳುವಿಕೆ ಅವಧಿಯನ್ನು ಅತಿಕ್ರಮಿಸಬಹುದಾದ ಅರ್ಜಿದಾರರ ಡೇಟಾ ವರದಿ ಮಾಡುವಿಕೆ ಅಗತ್ಯಗಳು.

## ನಿಮ್ಮ ಆಯ್ಕೆ ಮತ್ತು ಹಕ್ಕುಗಳು

Intel ನ ಗೌಪ್ಯತೆ ಸೂಚನೆಯಲ್ಲಿ ವಿವರಿಸಿರುವಂತೆ ನಿಮ್ಮ ವೈಯಕ್ತಿಕ ಮಾಹಿತಿಯ ತಿದ್ದುಪಡಿ, ಪರಿಷ್ಕರಣೆ ಮಾಡಲು, ಪ್ರವೇಶ ಅಥವಾ ಅಳಿಸುವಿಕೆಯನ್ನು ಕೋರಲು ನೀವು ಹಕ್ಕುಗಳನ್ನು ಹೊಂದಿದ್ದೀರಿ. ಇದರ ಜೊತೆಗೆ, ನೀವು ನಿಮ್ಮ ರೆಸ್ಯೂಮ್ ಅಪ್‌ಡೇಟ್ ಮಾಡಲು ಅಥವಾ ಇಲ್ಲದಿದ್ದಲ್ಲಿ ಬದಲಾವಣೆಗಳನ್ನು ಮಾಡಲು ಬಯಸಿದರೆ, ಹೊಸ ರೆಸ್ಯೂಮ್ ಅನ್ನು ಮರುಸಲ್ಲಿಸಿ. Intel ನ ಸಿಸ್ಟಂಗಳಿಂದ ನಿಮ್ಮ ರೆಸ್ಯೂಮ್ ಅನ್ನು ನೀವು ಸಂಪೂರ್ಣವಾಗಿ ತೆಗೆದುಹಾಕಲು ಬಯಸಿದರೆ, ದಯವಿಟ್ಟು ನಮ್ಮನ್ನು ಇಲ್ಲಿ ಸಂಪರ್ಕಿಸಿ. ನಿಮ್ಮ ರೆಸ್ಯೂಮ್ ಕಂಡುಕೊಳ್ಳಲು ನಮ್ಮ ಬೆಂಬಲ ಏಜೆಂಟ್‌ಗಳಿಗೆ ಸಹಾಯ ಮಾಡುವುದಕ್ಕಾಗಿ, ನಿಮ್ಮ ರೆಸ್ಯೂಮ್‌ನೊಂದಿಗೆ ಸಲ್ಲಿಸಿದ ನಿಮ್ಮ ಹೆಸರು ಮತ್ತು ಸಂಪರ್ಕ ವಿವರಗಳನ್ನು ಸೇರಿಸುವುದನ್ನು ಖಚಿತಪಡಿಸಿಕೊಳ್ಳಿ.

## ನಮ್ಮನ್ನು ಸಂಪರ್ಕಿಸುವುದು ಹೇಗೆ

Intel ನ ಗೌಪ್ಯತೆ ಅಭ್ಯಾಸಗಳ ಕುರಿತು ನೀವು ಪ್ರಶ್ನೆಗಳನ್ನು ಅಥವಾ ಕಳವಳಗಳನ್ನು ಹೊಂದಿದ್ದರೆ ಅಥವಾ ಈ ಸೂಚನೆಯಲ್ಲಿ ವಿವರಿಸಿರುವಂತೆ ನಿಮ್ಮ ಹಕ್ಕುಗಳು ಮತ್ತು ಆಯ್ಕೆಗಳನ್ನು ಚಲಾಯಿಸಲು, Intel ನ ಗೌಪ್ಯತೆ ಸೂಚನೆಯಲ್ಲಿ ಲಭ್ಯವಿರುವ ಮಾಹಿತಿಯನ್ನು ಬಳಸಿಕೊಂಡು ನೀವು ನಮ್ಮನ್ನು ಸಂಪರ್ಕಿಸಬಹುದು.

## EEA ನಲ್ಲಿರುವ ಅಭ್ಯರ್ಥಿಗಳಿಗಾಗಿ ಅನುಸೂಚಿ

ನೀವು Intel ಒಳಗಿನ ಒಂದು ಹುದ್ದೆಗಾಗಿ ಅರ್ಜಿ ಸಲ್ಲಿಸುತ್ತಿರುವ EEA ಅಭ್ಯರ್ಥಿಯಾಗಿದ್ದರೆ, ನಿಮ್ಮ ಅರ್ಜಿ, ಆಡಳಿತ, ಸಂಪನ್ಮೂಲ ನಿರ್ವಹಣೆ ಮುಂತಾದ ಉದ್ದೇಶಗಳಿಗಾಗಿ Intel Corporation ನಿಮ್ಮ ಡೇಟಾದ ನಿಯಂತ್ರಕನಾಗಿರುತ್ತದೆ. ಸ್ಥಳೀಯ ನೇಮಕಾತಿ, ಆನ್‌ಬೋರ್ಡಿಂಗ್ ಮತ್ತು ಯಾವುದೇ ಆನಂತರದ ಉದ್ಯೋಗ ಸಂಬಂಧಿತ ಪ್ರಕ್ರಿಯೆಗಳಿಗಾಗಿ ಸ್ಥಳೀಯ ನೇಮಕಾತಿ ಕಾನೂನು ಘಟಕಗಳು ಡೇಟಾ ನಿಯಂತ್ರಕವಾಗಿರುತ್ತವೆ. EU ಸಾಮಾನ್ಯ ಡೇಟಾ ರಕ್ಷಣೆ ಅಧಿನಿಯಮ ("GDPR"), ಯುನೈಟೆಡ್ ಕಿಂಗ್‌ಡಮ್ ಸಾಮಾನ್ಯ ಡೇಟಾ ರಕ್ಷಣೆ ಅಧಿನಿಯಮ ("UK GDPR") ಮತ್ತು ರಾಷ್ಟ್ರೀಯ ಡೇಟಾ ರಕ್ಷಣೆ ಕಾನೂನಿನಡಿಯಲ್ಲಿ ಈ ಕೆಳಗಿನ ವಿಭಾಗಗಳು ಹೆಚ್ಚುವರಿ ಮಾಹಿತಿಯನ್ನು ಒದಗಿಸುತ್ತವೆ.

## ಕಾನೂನು ಆಧಾರ, ಡೇಟಾ ರಕ್ಷಣೆ ಹಕ್ಕುಗಳು ಮತ್ತು ಸಂಪರ್ಕ

ನೇಮಕಾತಿ ಪ್ರಕ್ರಿಯೆಯ ಭಾಗವಾಗಿ ನೀವು ನಮ್ಮೊಂದಿಗೆ ಹಂಚಿಕೊಳ್ಳುವ ವೈಯಕ್ತಿಕ ಮಾಹಿತಿಯನ್ನು ಪ್ರಕ್ರಿಯೆಗೊಳಿಸಲು ಕಾನೂನುಬದ್ಧ ಹಿತಾಸಕ್ತಿಗಳು, ಕರಾರಿನ ನಿರ್ವಹಣೆ (ಕರಾರಿಗೆ ಪ್ರವೇಶಿಸುವ ಉದ್ದೇಶ ಸೇರಿದಂತೆ) ಮತ್ತು/ಅಥವಾ ಸಮ್ಮತಿ ಇವುಗಳ ಸಂಯೋಜನೆಯನ್ನು ನಾವು ಕಾನೂನು ಆಧಾರವಾಗಿ ಬಳಸುತ್ತೇವೆ.

EEA ನಲ್ಲಿರುವ ಅಭ್ಯರ್ಥಿಗಳು ತಮ್ಮ ವೈಯಕ್ತಿಕ ಮಾಹಿತಿಯ ಪ್ರಕ್ರಿಯೆಗೊಳಿಸುವಿಕೆಗೆ ಆಕ್ಷೇಪ ವ್ಯಕ್ತಪಡಿಸಬಹುದು, ತಮ್ಮ ವೈಯಕ್ತಿಕ ಮಾಹಿತಿಯ ಪ್ರಕ್ರಿಯೆಗೊಳಿಸುವಿಕೆಯನ್ನು

ನಿರ್ಬಂಧಿಸುವಂತೆ ನಮ್ಮನ್ನು ಕೇಳಬಹುದು ಅಥವಾ ತಮ್ಮ ವೈಯಕ್ತಿಕ ಮಾಹಿತಿಯ ಪೋರ್ಟಬಿಲಿಟಿಗೆ ವಿನಂತಿಸಬಹುದು. ವೈಯಕ್ತಿಕ ಮಾಹಿತಿಯ ಬಳಕೆಗೆ ಸಮ್ಮತಿಯನ್ನು ಪಡೆದಿರುವಲ್ಲಿ, ಭವಿಷ್ಯದಿಂದ ಜಾರಿಗೆ ಬರುವಂತೆ ಯಾವುದೇ ಸಮಯದಲ್ಲಿ ಅದನ್ನು ಹಿಂಪಡೆಯಬಹುದು. ಸಮ್ಮತಿ ಹಿಂಪಡೆಯುವಿಕೆಯು (1) ಹಿಂಪಡೆಯುವಿಕೆಗೆ ಮುನ್ನ ನಾವು ನಡೆಸಿದ ಯಾವುದೇ ಪ್ರಕ್ರಿಯೆಗೊಳಿಸುವಿಕೆಯ ಕಾನೂನುಬದ್ಧತೆ ಅಥವಾ (2) ಇತರ ಕಾನೂನು ಆಧಾರಗಳ ಅಡಿಯಲ್ಲಿ ವೈಯಕ್ತಿಕ ಮಾಹಿತಿಯ ಪ್ರಕ್ರಿಯೆಗೊಳಿಸುವಿಕೆ ಮೇಲೆ ಪರಿಣಾಮ ಬೀರುವುದಿಲ್ಲ.

ಈ ಗೌಪ್ಯತೆ ಸೂಚನೆಗೆ ಅನುಸರಣೆ ಹೊಂದಿಲ್ಲದ ವಿಧಾನದಲ್ಲಿ ನಾವು ನಿಮ್ಮ ವೈಯಕ್ತಿಕ ಮಾಹಿತಿಯನ್ನು ಬಳಸುತ್ತಿದ್ದೇವೆ ಎಂದು ನೀವು ಭಾವಿಸಿದರೆ ಅಥವಾ ನಿಮ್ಮ ಹಕ್ಕುಗಳ ಕುರಿತ ಹೆಚ್ಚಿನ ಮಾಹಿತಿಗಾಗಿ, ನಿಮ್ಮ ಸ್ಥಳೀಯ ಡೇಟಾ ರಕ್ಷಣೆ ಅಧಿಕಾರಿಯನ್ನು ಸಂಪರ್ಕಿಸಿ (ಯುರೋಪಿಯನ್ ಆರ್ಥಿಕ ಪ್ರದೇಶದಲ್ಲಿನ ಡೇಟಾ ರಕ್ಷಣಾ ಅಧಿಕಾರಿಗಳ ಸಂಪರ್ಕ ವಿವರಗಳು ಇಲ್ಲಿ ಲಭ್ಯ ಇವೆ.)

ಯುರೋಪಿಯನ್ ಆರ್ಥಿಕ ಪ್ರದೇಶದಲ್ಲಿ (EEA) ಸೃಷ್ಟಿಯಾದ ಮಾಹಿತಿಯನ್ನು ಯುರೋಪಿಯನ್ ಆಯೋಗ ನಿರ್ಧರಿಸಿದಂತೆ "ಪರ್ಯಾಪ್ತ ಮಟ್ಟದ ರಕ್ಷಣೆ" ಹೊಂದಿಲ್ಲದ EEA ಹೊರಗಿನ ಒಂದು Intel ಘಟಕಕ್ಕೆ ವರ್ಗಾಯಿಸುವಾಗ, Intel EEA ಬಾಧ್ಯತೆಯ ಕಾರ್ಪೊರೇಟ್ ನಿಯಮಗಳು ("EEA BCRs") ಎಂದು ಕರೆಯಲಾಗುವ EEA ಬಾಧ್ಯತೆಯ ಕಾರ್ಪೊರೇಟ್ ನಿಯಮಗಳ ಆಧಾರದಲ್ಲಿ ಅದನ್ನು ಮಾಡಲಾಗುತ್ತದೆ. Intel ನ EEA BCRs ವೈಯಕ್ತಿಕ ಮಾಹಿತಿಯ ಪರ್ಯಾಪ್ತ ರಕ್ಷಣೆಯನ್ನು ಸ್ಥಾಪಿಸುತ್ತವೆ ಮತ್ತು EEA BCRs ಗೆ ಅನುಸೂಚಿ 1 ರಲ್ಲಿ ಗುರುತಿಸಿರುವ ಅಧೀನ ಸಂಸ್ಥೆಗಲು ಮತ್ತು ಅಂಗಸಂಸ್ಥೆಗಳ ಮೇಲೆ ಕಾನೂನಾತ್ಮಕ ಬಾಧ್ಯತೆ ಹೊಂದಿವೆ. Intel ನ EEA BCRs ಅನ್ನು ಇಲ್ಲಿ ಪ್ರವೇಶಿಸಬಹುದು. Intel ನ EEA BCRs ಅನ್ವಯಿಸದಿರುವಲ್ಲಿ, ನಾವು EU ಪ್ರಮಾಣಿತ ಕರಾರಿನ ಕಲಂಗಳನ್ನು ಒಳಗೊಂಡಿರುವ ಕರಾರುಗಳಂತಹ ಕಾನೂನುಬದ್ಧ ಕ್ರಮಗಳ ಮೇಲೆ ನಾವು ಅವಲಂಬಿತರಾಗುತ್ತೇವೆ.

ಅದೇ ರೀತಿ, ಯುನೈಟೆಡ್ ಕಿಂಗ್‌ಡಮ್‌ನಲ್ಲಿ (UK) ಸೃಷ್ಟಿಯಾಗುವ ಮಾಹಿತಿಯನ್ನು "ಪರ್ಯಾಪ್ತ ಮಟ್ಟದ ರಕ್ಷಣೆ" ಹೊಂದಿಲ್ಲದ (ಸಮರ್ಥ UK ಅಧಿಕಾರಿಗಳು ನಿರ್ಧರಿಸಿದಂತೆ) UK ಹೊರಗಿನ ಒಂದು Intel ಘಟಕಕ್ಕೆ ವರ್ಗಾಯಿಸುವಾಗ, Intel UK ಬಾಧ್ಯತೆಯ ಕಾರ್ಪೊರೇಟ್ ನಿಯಮಗಳು ("UK BCRs") ಎಂದು ಕರೆಯಲಾಗುವ UK ಬಾಧ್ಯತೆಯ ಕಾರ್ಪೊರೇಟ್ ನಿಯಮಗಳ ಆಧಾರದಲ್ಲಿ ಅದನ್ನು ಮಾಡಲಾಗುತ್ತದೆ. Intel ನ UK BCRs ವೈಯಕ್ತಿಕ ಮಾಹಿತಿಯ ಪರ್ಯಾಪ್ತ ರಕ್ಷಣೆಯನ್ನು ಸ್ಥಾಪಿಸುತ್ತದೆ ಮತ್ತು UK BCRs ನ ಅನುಸೂಚಿ 1 ರಲ್ಲಿ ಗುರುತಿಸಿರುವ ಅಧೀನ ಸಂಸ್ಥೆಗಳು ಮತ್ತು ಅಂಗಸಂಸ್ಥೆಗಳ ಮೇಲೆ ಕಾನೂನು ಬಾಧ್ಯತೆ ಹೊಂದಿರುತ್ತದೆ. Intel ನ UK BCRs ಅನ್ನು **ಇಲ್ಲಿ** ಪ್ರವೇಶಿಸಬಹುದು. Intel ನ UK BCRs ಅನ್ವಯಿಸದಿರುವಲ್ಲಿ, ನಾವು ವರ್ಗಾಯಿಸುವ ವೈಯಕ್ತಿಕ ಮಾಹಿತಿಗೆ ಪರ್ಯಾಪ್ತ ರಕ್ಷಣೆಯನ್ನು ಒದಗಿಸಲು ಪ್ರಮಾಣಿತ ಕರಾರಿನ ಕಲಂಗಳಂತಹ ಇತರ ಕಾನೂನುಬದ್ಧ ಕ್ರಮಗಳ ಮೇಲೆ ನಾವು ಅವಲಂಬಿತರಾಗುತ್ತೇವೆ.

ಈ ಅನುಸೂಚಿಯಲ್ಲಿನ ಯಾವುದೇ ಮಾಹಿತಿಗೆ ಸಂಬಂಧಿಸಿ ನೀವು ಪ್ರಶ್ನೆಗಳು ಅಥವಾ ಕಳವಳಗಳನ್ನು ಹೊಂದಿದ್ದರೆ ಅಥವಾ ಒಂದು ವಿನಂತಿ ಸಲ್ಲಿಸಲು ಬಯಸಿದರೆ, ದಯವಿಟ್ಟು "***ನಮ್ಮನ್ನು ಸಂಪರ್ಕಿಸುವುದು ಹೇಗೆ***" ಎಂಬ Intel ಗೌಪ್ಯತೆ ಸೂಚನೆಯ ವಿಭಾಗವನ್ನು ಬಳಸಿಕೊಂಡು ನಮ್ಮನ್ನು ಸಂಪರ್ಕಿಸಿ.

## ಗೌಪ್ಯತೆ ಸೂಚನೆ ಲಿಂಕ್‌ಗಳು

- Intel ಗೌಪ್ಯತೆ ಸೂಚನೆ
- Intel® Active Management Technology ಸೂಚನೆ